Grades of pay of non-Gazetted Officers.

Q.—56. **Srimathi Ballari SIDDAMMA** (Davangere).—Will the Government be pleased to state :—

(*a*) the grades of pay of the menials in Government service ;

(*b*) the grades of pay of non-gazetted teachers in Primary, Middle and High Schools and Colleges ;

(*c*) the grades of pay of non-gazetted police officers in the State ;

(*d*) the grades of pay for the abovesaid categories of posts in the neighbouring provinces ?

A. **Sri A. G. RAMACHANDRA RAO** (Minister for Law and Education). [On behalf of Sri K. Hanumanthaiya, (Chief Minister)].—(*a*), (*b*), (*c*) and (*d*). The details of grades for the classes of employees are contained in Appendix 'B' to the Budget Estimates.

The details regarding other States are not available.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಮಾಹನೀಯರೆ, ಈ ಸಭೆಗೆ ನಾನು ಕಳುಹಿಸಿದ ಈ ಪ್ರಶ್ನೆಯ ಉದ್ದೇಶ ಸರ್ಕಾರಕ್ಕೆ ಅರ್ಥವಾಗಿದೆ, ಇದನ್ನು ತಿಳಿದುಕೊಂಡು ಉತ್ತರ ಕೊಟ್ಟಿರುತ್ತಾರೆಂದು ಭಾವಿಸಿದ್ದೆ ; ಆದರೆ ಆ ರೀತಿಯಲ್ಲಿ ಇಲ್ಲ. ನನ್ನ ಉದ್ದೇಶ ನಾರ್ಮೆಜೆಟೆಡ್ ಆಫೀಸರು ಗಳಿಗೆ ಕೊಡುತ್ತಿರುವ ಸಂಬಳ ಬಹಳ ಕಡಮೆ; 20, 25 30 ರೂಪಾಯಿ ಸಂಬಳ ತೆಗೆದುಕೊಂಡು ಈ ಕಾಲದಲ್ಲಿ ಕೆಲಸ ಮಾಡುವುದು ಬಹಳ ಕಷ್ಟ, ಆದುದರಿಂದ ಈ ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕೆಂಬ ಉದ್ದೇಶ. ಹೀಗಿರುವಾಗ ಹೀಗೆ ಜವಾಬು ಕೊಟ್ಟಿರುವುದು ಸರಿಯೆ ?

ಅಧ್ಯಕ್ಷರು.—ಇನ್ನೇನಾದರೂ ಬೇರೆ ಪ್ರಶ್ನೆಯಿದ್ದರೆ ಕೇಳಿ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಎಸ್. ಜಿ. ಓ. ಗಳಿಂದ ಕೈ ತುಂಬ ಕೆಲಸ ತೆಗೆದುಕೊಳ್ಳಬೇಕು, ಅವರಿಗೆ ಹೊಟ್ಟೆಗಾಗುವಷ್ಟು ಸಂಬಳ ಕೊಡಬೇಕು ಎಂಬುದರಲ್ಲಿ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ತತ್ವವನ್ನು ಒಪ್ಪಿಕೊಳ್ಳುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಕೇಂದ್ರ ಸರ್ಕಾರದ ಅಥವಾ ಕಾಫಿ ಬೋರ್ಡಿನ ಜವಾನನ ಸಂಬಳವೂ ನಮ್ಮ ಸಂಸ್ಥಾನದ ಒಬ್ಬ ಪದವೀಧರನ ಸಂಬಳವೂ ಒಂದೇ ಅಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಂಬಳ ಒಂದೇ ಅಲ್ಲ. ಅಂತರ ಹೆಚ್ಚಿರಬಾರದೆಂಬ ತತ್ವವನ್ನು ಒಪ್ಪಿ ಕೊಳ್ಳುತ್ತೇವೆ.

ಶ್ರೀ ಡಿ. ಎಂ. ಗೋವಿಂದರಾಜು.— ಮುನಿಸಿಪಲ್ ಹೈಸ್ಕೂಲಿನಲ್ಲಿ ಕೆಲಸ ಮಾಡುವುದೂ ಸರ್ಕಾರಿ ಹೈಸ್ಕೂಲಿನಲ್ಲಿ ಕೆಲಸ ಮಾಡುವುದೂ ಒಂದೇ ಅಲ್ಲವೆ ? ಆದರೆ ಸಂಬಳ ಗ್ರೇಡುಗಳಲ್ಲಿ ಏಕೆ ವ್ಯತ್ಯಾಸವಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮುನಿಸಿಪಾಲಿಟಿ ಗಳ ಶಕ್ತಿಮೇರೆ ಹೋಗುತ್ತದೆ.

ಶ್ರೀ ಡಿ. ಎಂ. ಗೋವಿಂದರಾಜು —ಈ ವ್ಯತ್ಯಾಸ ವನ್ನು ಪರಿಸ್ಥಿತಿಗನುಗುಣವಾಗಿ ಸರಿಪಡಿಸುವುದೊಳ್ಳೆ ಯಿಡಲ್ಲವೆ, ಅಗತ್ಯವಿದ್ದರೆ ಕಾನೂನನ್ನಾದರೂ ಮಾಡಿ ?

ಶ್ರೀ ಎ ಜಿ. ರಾಮಚಂದ್ರರಾವ್.—ಆಯಾ ಮುನಿಸಿ ಪಾಲಿಟಿಯವರು ಪರಿಶೀಲನೆ ಮಾಡಬೇಕೆಂದರೆ ಮಾಡು ತ್ತೇವೆ.

Residences of Ministers, Chairman and Speaker.

Q.—143. **Sri N. C. NAGAIAH REDDY** (Gowribidnur).—Will the Government be pleased to state :—

(*a*) the estimated cost and the amount of expenditure incurred for repairing, improving and furnishing the residences of the Chief Minister, other Ministers, Speaker and Chairman at Bangalore from 1st April 1952 up to-date (the answers are to be given separately for every one of them) ;

(*b*) how many buildings are set apart for the residences of the Ministers, Speaker and Chairman at Mysore ;

(*c*) what is the estimated cost for repairing, improving and furnishing these residences from 1st April 1952 up-to-date ?

A.—**Sri A. G. RAMACHANDRA RAO** (Minister for Law and Education) [On behalf of. Sri K. Hanumanthaiya, (Chief Minister)]

(*a*) Residence	Improvements and repairs		Furnishing			
	Estimate	Outlay				
	Rs.	Rs.	Rs.	a.	p.	
1. Chief Minister (Kumara Krupa).	4,000	3,793	758	12	0	Paid.
			3,261	0	0	Pending Payment.
2. Minister for Home and Industries (Race View).	6,985	4,854	3,492	5	0	Paid.
3. Minister for Revenue and Public Works (Race View Cottage).	8,000	7,917	2,798	0	0	Paid.
4. Minister for Public Health and Local Self-Government (Vimala Prabha).	485	485	2,480	9	0	Paid.
5. Minister for Law and Education	...	...	...			
6. Speaker ...	...	...	507	13	9	Pending Payment.
7. Chairman ... (*b*) and (*c*)	...	...	5 545	5	9	Do
Mysore (Jaladarshini) Chief Minister.	1,488	1,488	589	0	0	
Residences for other Ministers, Speaker, Legislative Assembly and Chairman, Legislative Council.	17,964	17,964	844	7	0	

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಸ್ಪೆಷಲ್ ರಿಪೇರಿಗಳು ಮತ್ತು ಆನ್ಯುಯಲ್ ರಿಪೇರಿಗಳು ಎಲ್ಲವನ್ನೂ ಸೇರಿಸಿ ಉತ್ತರ ಕೊಟ್ಟಿದೆಯೋ ಅಥವಾ ಬೇರೆ ಬೇರೆ ಇದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲವನ್ನೂ ಸೇರಿಸಿ ಕೊಟ್ಟಿದೆಯೆಂದು ತಿಳಿದುಕೊಂಡಿದ್ದೇನೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಕ್ರಮೆ ತೋರಿಸುವುದಕ್ಕಾಗಿ ಬೇರೆ ಬೇರೆಯಾಗಿ ಹಾಕುವುದು ಪದ್ಧತಿ, ಹಾಗೆ ಮಾಡಿದ್ದೀರಾ ಇಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪಾಸ್ತ್ಪಾಂತ ಏನಿದೆಯೋ ಅದನ್ನು ಇಲ್ಲಿ ನಮೂದು ಮಾಡಿದೆ.

Mr. SPEAKER.—For repair and improvement—that is your question for which the answer is given.

ಶ್ರೀ ಆರ್. ಅನಂತರಾಮ್.—ಹಿಂದಿನ ಸಾರಿ ಎಷ್ಟು ಮಂತ್ರಿಗಳಿದ್ದರು?

Srl A. G. RAMACHANDRA RAO.—That question does not arise.

ಶ್ರೀ ಆರ್. ಅನಂತರಾಮ್.—ಇಷ್ಟೊಂದು ಹೆಚ್ಚು ಹಣ ಬೆಂಚು ಕುರ್ಚಿಗಳಿಗೆ ಖರ್ಚಾಗಿದೆ. ಉದಾಹರಣೆಗೆ ಮಿನಿಸ್ಟರ್ ಫಾರ್ ಪಬ್ಲಿಕ್ ಹೆಲ್ತ್ ಮತ್ತು ಲೋಕಲ್ ಸೆಲ್ಫ್ ಗೌರ್ನಮೆಂಟ್ ಇರುವ ಮನೆಯಲ್ಲೇ ಹಿಂದೆ ಮಂತ್ರಿಗಳಿದ್ದರಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದ್ದರು.

ಶ್ರೀ ಆರ್. ಅನಂತರಾಮ್.—ಅದರಲ್ಲಿ ಹಿಂದೆ ಹಾಕಿದ್ದ ಬೆಂಚು ಕುರ್ಚಿಗಳೇನಾದವು ?

ಶ್ರೀ ಎ. ಜಿ. ರಾಮಚಂದ್ರರಾವ್.—ಇವೆ.

ಶ್ರೀ ಆರ್. ಅನಂತರಾಮ್.—ಹಿಂದಿನವೇನಾದವು ಹೊಸದಾಗಿ ತೆಗೆದುಕೊಂಡಿದ್ದೀರಲ್ಲಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೊಸದಾಗಿ ಕೊಂಡು ಕೊಂಡಿರುವುದು, ಬಣ್ಣಹಾಕಿದ್ದು, ರಿಪೇರಿ ಮಾಡಿದ್ದು ಎಲ್ಲ ಸೇರಿವೆ.

ಶ್ರೀ ಆರ್. ಅನಂತರಾಮ್.—ಮೈಸೂರಿನಲ್ಲಿ 'ಜಲದರ್ಶಿನಿ' ಎಂದಿದೆ. ಜಾಕೀಸ್ ಕ್ವಾರ್ಟರುಗಳನ್ನು ಮಂತ್ರಿಗಳ ಬಂಗಲೆಗಾಗಿ ಮಾಡಿದ್ದಾರೆಂಬುದು ಗೊತ್ತಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು

ಶ್ರೀ ಆರ್. ಅನಂತರಾಮ್.—ಅವಕ್ಕೆ ಸುಮಾರು 19 ಸಾವಿರ ರೂಪಾಯಿ ಖರ್ಚು ಮಾಡಿ, ನೀರು, ಡ್ರೈನೇಜು ಮುಂತಾದ ಕೆಲಸಗಳಿಗೆ ಖರ್ಚು ಮಾಡಿರುವುದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು. ಅವಕ್ಕೆ ನಲ್ಲಿಗಳು, ಅಂಡರ್ ಗ್ರೌಂಡ್ ಡ್ರೈನೇಜು ಮುಂತಾದ ಅನುಕೂಲಗಳಿರಲಿಲ್ಲ, ಅದನ್ನೆಲ್ಲಾ ಮಾಡಿದೆ.

ಶ್ರೀ ಆರ್. ಅನಂತರಾಮ್.—'ಜಲದರ್ಶಿನಿ'ಗೆ ಬರಿಯ 500 ರೂಪಾಯಿ ಮಾತ್ರ ತೋರಿಸಿದ್ದೀರಿ, ಏಕೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ಖರ್ಚು ಮಾಡಿಲ್ಲ.

ಶ್ರೀ ಆರ್. ಅನಂತರಾಮಚ್.—ಜಾಕಿ ಕ್ವಾರ್ಟರ್ಸ್ ಗಳಿಗೆ ಸೇರಿಸಿದ್ದೀರಿ. ಇದನ್ನು ಆ ರೆಕ್ಕಕ್ಕೇಕೆ ಸೇರಿಸಿಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—ಜಲದರ್ಶಿನಿಗೇ ಬೇರೆ ಕೊಟ್ಟು, ಜಾಕಿ ಕ್ವಾರ್ಟರುಗಳಿಗೇ ಬೇರೆ ಕೊಟ್ಟಿದೆ.

ಶ್ರೀ ಆರ್. ಅನಂತರಾಮಚ್.—589 ರೂಪಾಯಿ ಜಲದರ್ಶಿನಿಗೆ ಖರ್ಚಾಗಿದೆಯೆಂದು ಬೇರೆ ಕೊಟ್ಟಿದೆ. ಅದನ್ನೂ ಏಕೆ ಜಾಕಿ ಕ್ವಾರ್ಟರುಗಳ ರೆಕ್ಕದಲ್ಲಿ ಸೇರಿಸಿಲ್ಲ?

ಶ್ರೀ ಎ. ಜಿ ರಾಮಚಂದ್ರರಾವ್.—589 ರೂಪಾಯಿಗಳು ಫರ್ನಿಷಿಂಗಿಗೆ.

ಶ್ರೀ ಆರ್. ಅನಂತರಾಮಚ್.—ಅವುಗಳ ರೆಕ್ಕದ ಜೊತೆಯಲ್ಲೇ ಏಕೆ ಸೇರಿಸಿಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—ಜಲದರ್ಶಿನಿಯೇ ಬೇರೆ. ಮಿಕ್ಕ ಮಂತ್ರಿಗಳು, ಸ್ಪೀಕರ್, ಚೀಫ್ ವಿಪ್ ಇವರ ಕ್ವಾರ್ಟರ್ಸ್ ಎಲ್ಲವನ್ನೂ ಸೇರಿಸಿ ಒಂದು ಕಡೆ ಕೊಟ್ಟಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಪ್ರತಿಯೊಬ್ಬರು ಮಂತ್ರಿಗಳ ಮನೆಯಲ್ಲಿರತಕ್ಕ ಫರ್ನಿಚರುಗಳ ಒಟ್ಟು ಬೆಲೆ ಎಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಜೆ. ಮಹಮ್ಮದ್ ಇಮಾಂ.—ಈಗ furnish ಮಾಡಿಮ್ಮು ಪೂರ್ತಿ ಮಾಡಿದ್ದೋ ಅಥವಾ ಪೊದಲಮ್ಮುದರ ಜೊತೆಗೆ ಸೇರಿಸಿದ್ದೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟೆಷ್ಟು ಅಗತ್ಯವೋ ಅಷ್ಟು ಮಾತ್ರ ಮಾಡಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಪೊದಲು ಅಲ್ಲಿ ಮಂತ್ರಿಗಳಿದ್ದಾಗ ಫರ್ನಿಚರ್ ಇತ್ತೋ ಇಲ್ಲವೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಜಾಕೀಸ್ ಕ್ವಾರ್ಟರ್ಸ್‌ನಲ್ಲಿರಲಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಬೆಂಗಳೂರಿನಲ್ಲಿ ಕುಮಾರ ಕೃಪಾದಲ್ಲಿ ಬೇಕಾದಷ್ಟು ಇತ್ತೋ ಇಲ್ಲವೊ?

ಶ್ರೀ ಎ. ಜಿ ರಾಮಚಂದ್ರರಾವ್.—ಕೆಲವು ಇದ್ದವು.

ಶ್ರೀ ಜೆ. ಮಹಮ್ಮದ್ ಇಮಾಂ.—ಹೊಸದಾಗಿ ಮಾಡಿಸಿದ್ದು ಏನೇನೆಂಬುದನ್ನು ಹೇಳಬಲ್ಲಿರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಜೆ. ಮಹಮ್ಮದ್ ಇಮಾಂ.—ಸ್ವಾಮಿ, ಈ improvement ಬಗ್ಗೆ ಬರಿ ಕುರ್ಚಿ, ಬೆಂಚುಗಳಿಗಾಗಿಯೇ ಎಂಟು ಸಾವಿರ ಖರ್ಚಾಯಿತೇ?

ಶ್ರೀ ಕಡಿದಾಳ್ ಮಂಜಪ್ಪ.—ಅವರಲ್ಲಿ ಅನೇಕ ಐಟಂಗಳು ಸೇರಿವೆ. ಒಂದು ಅಡಿಷನಲ್ ರೂಮನ್ನು, ಒಂದು ಕ್ಯಾಟ್ಲ್ ಷೆಡ್ಡನ್ನೂ ಕಟ್ಟಿಸಲಾಗಿದೆ. ಅಲ್ಲದ್ದೂ ಹಳೆ ಜಮಖಾನೆ, ಮುರುಕು ಕುರ್ಚಿಗಳು ಮತ್ತು ಅಪ್ಪರ್ ಕ್ಲಾತ್, ವೈಟ್‌ವಾಷ್ ಇವುಗಳೆಲ್ಲಕ್ಕೂ ಸೇರಿ ಅಷ್ಟು ಖರ್ಚಾಗಿದೆ.

Sri H. SIDDAVEERAPPA.—No new furniture has been furnished. I want to make the position clear. ಎಲ್ಲ ಹಳೆಯ ಸಾಮಾನುಗಳನ್ನೇ ರಿಪೇರಿ ಮಾಡಿಸಲಾಗಿದೆ. ಹೊಸದಾಗಿ ಯಾವುದನ್ನೂ ಕೊಂಡುಕೊಂಡಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಹೋಂ ಮಿನಿಸ್ಟರ್ ರವರ ವಿಚಾರ ತೆಗೆದುಕೊಳ್ಳಿ. ಈ 3,492 ರೂಪಾಯಿ ಗ್ರಾಂಟನ್ನು ಖರ್ಚು ಮಾಡಿರತಕ್ಕದರ ಪೈಕಿ ಯಾವ ಯಾವುದಕ್ಕೆ ಎಷ್ಟೆಷ್ಟನ್ನು ಖರ್ಚು ಮಾಡಲಾಗಿದೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳೆಲ್ಲಾ ಈಗ ಸದ್ಯಕ್ಕೆ ನನ್ನಲ್ಲಿಲ್ಲ. Notice please.

ಶ್ರೀ ಜೆ. ಮಹಮ್ಮದ್ ಇಮಾಂ.—ಡಿಪ್ರಿಸಿಯೇಷನ್‌ಗೆ ಇಷ್ಟು ಜಾಸ್ತಿ ಖರ್ಚಾಗಲು ಏನು ಕಾರಣ?

ಶ್ರೀ ಎ. ಜಿ. ರಾಮಚಂದ್ರರಾವ್.—ವೇರೆಂಡ್‌ಜೇರೇ ಜಾಸ್ತಿಯಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಇಂಥ ದುಡ್ಡಿನ ಅಭಾವದ ಕಾಲದಲ್ಲಿ ಅಷ್ಟೊಂದು ಸಾಮಾನುಗಳು ಏತಕ್ಕೆ ಬೇಕು?

ಶ್ರೀ ಕಡಿದಾಳ್ ಮಂಜಪ್ಪ.—ತಾವು ನನ್ನ ಮನೆಗೆ ಬಂದು ನೋಡಿದರೆ ತಮಗೇ ಗೊತ್ತಾಗುತ್ತದೆ. ಆಗಾಗ ತಾವು ದಯಮಾಡಿಸುತ್ತಿರಬೇಕು.

ಶ್ರೀ ಜೆ. ಮಹಮ್ಮದ್ ಇಮಾಂ.—ನಾನೂ ಮಂತ್ರಿಯಾಗಿದ್ದೆ. ಆಗ ನಾನು ಎರಡು ಕುರ್ಚಿ ಒಂದು ಮೇಜು ಇಷ್ಟನ್ನು ಮಾತ್ರವೇ ಇಟ್ಟುಕೊಂಡಿರಲಿಲ್ಲವೇ?

(ಉತ್ತರವಿಲ್ಲ).

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಫರ್ನಿಚರುಗಳೆಲ್ಲ ಸರ್ಕಾರಕ್ಕೆ ಸೇರಿದವುಗಳಲ್ಲವೇ, ಸ್ವಾಮಿ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದರಲ್ಲಿ ಮಂತ್ರಿಗಳಿಗೆ ಸೇರಿರತಕ್ಕ ಸ್ವತ್ತೇನಾದರೂ ಇದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಂದ ಮೇಲೆ ಉಳಿದ ಪ್ರಶ್ನೆಗಳೆಲ್ಲಾ ಬರಿ ನಿಷ್ಪ್ರಯೋಜನವಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

Supply of electricity to Kadabankatte village in Chitaldrug Taluk.

Q —195. Sri G. SIVAPPA.—(Holalkere).—Will the Government be pleased to state:—

(a) whether any representation has come from the village of Kadabankatte in Chitaldrug Taluk for sanctioning of electricity to supply drinking water;

(b) whether any estimate has been prepared for supplying drinking water to the Village?

Sri A. G. RAMACHANDRA RAO (Minister for Law and Education) [On